(ಊ) ಮಂಗಳೂರು ತಾಲ್ಲೂಕಿನ ಮೂಡುಶೆಟ್ಟಿ ಪಾಳ್ಯದಲ್ಲಿ ರಸ್ತೆ ಪಕ್ಕದಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟುತ್ತಿರುವುದು.

ಶ್ರೀ ಕುಂಭೆ ಸುಂದರ ರಾವ್ (ಸುರತ್ಕಲ್) :— ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲ್ಲೂಕಿನ ಮೂಡುಶೆಟ್ಟಿ ಪಾಳ್ಯ ಪ್ರದೇಶದಲ್ಲಿ ಸರ್ಕಾರಿ ಜಮೀನು ಬಹಳ ಇದೆ. ಅಕ್ರಮವಾಗಿ ಮನೆ ನಿರ್ಮಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಿಗೆ ಆಗುತ್ತಿದೆ. ಕಳೆದ ವರ್ಷ ಸದನದಲ್ಲಿ ನಾನು ಇದನ್ನು ಪ್ರಸ್ತಾಪಿಸಿದ್ದೆ. ಅಕ್ರಮವಾಗಿ ಮನೆ ಕಟ್ಟುವವರಿಗೆ ಅವಕಾಶ ಕೊಟ್ಟರೆ ಜಿಬಿ ಆಸ್ಪತ್ರೆಯ 200 ಎಕರೆಯೂ ಕಬಳಿಸಲ್ಪಡುತ್ತದೆ. ಆದ್ದರಿಂದ ಅವರಿಗೆಲ್ಲಾ ಆಳತೆ ಮಾಡಿ ನಿವೇಶನ ಕೊಟ್ಟು ಮುಂದೆ ಅಕ್ರಮ ಆಗದಿದ್ದ ಹಾಗೆ ತಡೆಯುವ ಕೆಲಸ ಮಾಡಬೇಕು. ಈ ರೀತಿ ಪ್ರಸ್ತಾಪವಾದಾಗ ಒಂದೇ ಸಲಕ್ಕೆ ತಮ್ಮ ಇಲಾಖೆ ಎಚ್ಚೆತ್ತು ಅಲ್ಲಿಗೆ ಹೋಗಿ ಯಾರು ಅಕ್ರಮ ಗುಡಿಸಲು ಹಾಕಿದ್ದರು ಅವನ್ನು ತೆಗೆದುಹಾಕಿದರು. ಆ ಮನೆಗಳನ್ನೆಲ್ಲ ಗುರ್ತು ಹಾಕಿಕೊಂಡು ನಿಮಗೆಲ್ಲಾ ಮನೆಗಳಿಗೆ ನಿವೇಶನ ಕೊಡುತ್ತೇವೆ ಅಂದರು. ವರ್ಷವೊಂದು ಕಳೆಯಿತು, ಇದುವರೆಗೆ ನಿವೇಶನ ಕೊಡಲಿಲ್ಲ. ಅವರು ಆಫೀಸಿನಿಂದ ಆಫೀಸಿಗೆ ಎಡತಾಕುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಇತ್ತೀಚೆಗೆ ನಾನು ಹೋಗಿ ನೋಡುತ್ತೇನೆ, ಪುನಃ ಮನೆಗಳೆದ್ದಿವೆ. ಗೋಡೆ ಕಟ್ಟಿ ಅಕ್ರಮವಾಗಿ ಕುಳಿತುಕೊಂಡಿದ್ದಾರೆ. ಇದಕ್ಕೆ ಮುಕ್ತಾಯ ಯಾವಾಗ? ಸರ್ಕಾರಿ ಜಮೀನು ಈ ರೀತಿ ಅಕ್ರಮವಾಗಿ ಅಕ್ರಮಿಸಲ್ಪಟ್ಟಾಗ ಇಲಾಖೆಯವರು ಅದನ್ನು ನೋಡುವುದಿಲ್ಲವೆಂದರೆ ಎಲ್ಲರೂ ಹೀಗೆ ಮಾಡಬಹುದು. ನಮ್ಮಲ್ಲಿ ಏನು ಗಾದೆ ಇದೆಯೆಂದರೆ, ಯಾರಾದರೂ ಮನೆ ಇಲ್ಲ ಅಂದಾಗ "ಯಾಕಯ್ಯ ಯೋಚನೆ ಮಾಡತ್ತೀಯ ಮೂಡುಶೆಟ್ಟಿಗೆ ಹೋಗು ಒಂದು ಗುಡಿಸಲು ಹಾಕಿಕೊ" ಎಂದು ಹೇಳುತ್ತಾರೆ. ಆದರೆ, ಅಲ್ಲಿ ಇವತ್ತು ಯಾರೂ ಹೇಳುವವರು ಕೇಳುವವರಿಲ್ಲದ ಪರಿಸ್ಥಿತಿ ಬಂದಿದೆ. ಇನ್ನೂ ಒಂದು ಗಾದೆ ಇದೆ ಅಧ್ಯಕ್ಷರೆ, "ನಂದರಾಯನ ಬದುಕು ನರಿನಾಯಿ ತಿಂದುಹೋಯಿತು ಚರ್ಮದ ನಾಣ್ಯ ಮಾಡಿದರಂತೆ". ಆದ್ದರಿಂದ ಬಡವರಿಗೆ ನಿವೇಶನ ಕೊಡಬೇಕು, ಇದರ ಜಮೀನನ್ನು ಭದ್ರ ಮಾಡಬೇಕು, ಈ ಬಗ್ಗೆ ಇಲಾಖೆ ತುರ್ತು ಕ್ರಮ ಕೈಗೊಳ್ಳಬೇಕು, ತಡ ಮಾಡಿದರೆ ಪರಿಸ್ಥಿತಿ ಕೆಟ್ಟದಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕಿನ ಮೂಡುಶೆಟ್ಟಿ ಪಾಳ್ಯದಲ್ಲಿ ರಸ್ತೆ ಪಕ್ಕದಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆಯೆಂದು ಕಾರ್ಯನಿರ್ವಾಹಕ ಅಧಿಕಾರಿಗಳು ಅದನ್ನೆಲ್ಲಾ ಕಿತ್ತುಹಾಕಿಸಿದರು. ಆದಾದ ಮೇಲೆ ಅಲ್ಲಿ ನಿವೇಶನ ಹಂಚಬೇಕಾಗಿತ್ತು. ತೊಗಲಖೊರವರು ತಾಮ್ರದ ನಾಣ್ಯವನ್ನು ಮಾಡಿದ್ದರು. ಚರ್ಮದ ನಾಣ್ಯಗಳ ಬಗ್ಗೆ ಪ್ರತಿ ಮನೆಯೂ ಟಂಕಶಾಲೆಯಾಗಿದ್ದರಿಂದ ಅದನ್ನು ಆತ ಕೈಬಿಟ್ಟ. ನೀವು ಕೇಳಿದ್ದು ಪುರಾಣದ ಕಥೆ. ಆದರೆ, ಅಲ್ಲಿ ಭೂಮಿ ಬೆಲೆ ಬಹಳ ದುಬಾರಿಯಾಗಿದ್ದು ಸಾಕಷ್ಟು ಮಾಹಿತಿಯು ಭೂಮಿ ಬಗ್ಗೆ ಸಿಗದಿದ್ದುರಿಂದ ನಿವೇಶನ ಇನ್ನೂ ಹಂಚಲಾಗಿಲ್ಲ. ಈಗ ತಾವು ಹೇಳಿದ ಪ್ರಕಾರ ಅಲ್ಲಿಯೇ ಮನೆಗಳನ್ನು ಕಟ್ಟಲು ಅವಕಾಶ ಕೊಡುವುದಿಲ್ಲ. ಈ ಕೂಡಲೇ ಆದೇಶ ರವಾನಿಸಿ ಅವರಿಗೆಲ್ಲಾ ಬದಲಿ ನಿವೇಶನ ಕಲ್ಪಿಸಿದ ನಂತರ ಅಲ್ಲಿರುವ ಅತಿಕ್ರಮಣ ಪ್ರವೇಶದಾರರನ್ನು ಕಿತ್ತುಹಾಕುವ ಪ್ರಯತ್ನ ಮಾಡುವೆವು.